

# ಫೊಬಾಶಿ ಮನೆಯಲ್ಲೊಂದು ಪ್ರಸಂಗ

ಛಾವಣಿಯ ಮೇಲಿಂದ ಕೆಂಪು ಹುಂಜ ಕರ್ಕಶವಾಗಿ ಕೂಗಿದೇಟಿಗೇ ಝೀನತ್‌ಗೆ ಎಚ್ಚರವಾಯಿತು. ಫೊಬಾಶಿಯ ಮನೆ ಹಳ್ಳಿಯ ಕೊನೆಯಲ್ಲಿತ್ತು; ಮನೆಯ ಎದುರಿಗೆ ಹೊಲ, ಹೊಲಕ್ಕೆ ಅಂಟಿಕೊಂಡಂತೆ ನದಿ ಮತ್ತು ರೈಲ್ವೇ ಹಳಿ.

ಕೆಂಪು ಹುಂಜದ ಕೂಗು ಅಕ್ಕಪಕ್ಕದ ಛಾವಣಿಗಳ ಮೇಲಿಂದ ಉತ್ತರಗಳನ್ನೂ ಹೊರಡಿಸಿತು. ಮರುಗಳಿಗೆಗೇ ಉಪ್ಪುನೇರಳೆ ಮರಗಳ ನಡುವಿನ ಮಸೀದಿಯ ಉದ್ದನೆಯ ಮಿನರತ್ ಗೋಪುರದಿಂದ ಬಂದ ಮುಯಿಝಿನ್‌ನ ಕೂಗಿಗೆ ಆ ಕೂಗುಗಳು ಸುಮ್ಮನಾದವು. 'ಮಲಗುವುದಕ್ಕಿಂತ ಪ್ರಾರ್ಥಿಸುವುದು ಲೇಸು' ಎಂದು ಮುಯಿಝಿನ್ ಕೂಗುತ್ತಿದ್ದ.

ಝೀನತ್ ಪಕ್ಕದಲ್ಲಿ ಸಾಲುಸಾಲಾಗಿ ಮಲಗಿದ್ದ ಮಕ್ಕಳಿಗೆ ಹಳೆಯ ಚಿಂದಿಗಳಿಂದ ಹೊಲಿದ ಕಂಬಳಿ ಹೊದಿಸಿ, ಹಿರಿ ಮಗಳ ಭುಜ ಅಲ್ಲಾಡಿಸಿದಳು.

'ಬೆಳಗಾಯಿತು. ದೇವರು ಕೊಟ್ಟ ಇನ್ನೊಂದು ದಿನ. ಏಳೇ ನೈಮಾ. ಇವತ್ತು ಸಂತೆ.'

ನೈಮಾ ಅಂಗಾತ ಮಲಗಿ ಮೈಮುರಿಯುತ್ತಾ ಹಂಗೇ ಬಿದ್ದುಕೊಂಡಳು. ಬಿರುಗಾಳಿ ಸರ್‍ರನೆ ಮುಖಕ್ಕೆ ಹೊಡೆದವಳಂತೆ ಝೀನತ್ ತನ್ನೆದುರಿಗೆ ಮಲಗಿದ್ದ ಆ ದೇಹವನ್ನು ನೋಡಿದಳು. ನೈಮಾ ಮೇಲೆದ್ದವಳೇ ಲಂಗವನ್ನು ತೊಡೆಯ ತುಂಬಾ ಎಳೆದುಕೊಂಡಳು; ಗುಂಡಗಿನ ಮುಖದಲ್ಲಿ ಕೆನ್ನೆಮೂಳೆ ಎದ್ದು ಕಾಣುತ್ತಿದ್ದವು. ನೈಮಾ ಇನ್ನೂ ನಿದ್ದೆ ಎಳೆಯುತ್ತಿದ್ದ ಕಣ್ಣುಜ್ಜಿಕೊಂಡಳು.

'ಸಂತೆಗೆ ಕಾಳು ತಗೊಂಡು ಹೋಗ್ತೀಯ ಮಗಳೆ? ಹೊತ್ಕೊಂಡೋಗೋಕೆ ತೀರಾ ಭಾರ ಆಗುತ್ತೋ ಏನೋ?'

